# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಮಾನ್ಯ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ಸಂಯುಕ್ತ ಕರ್ನಾಟಕ  ದಿನಾಂಕ : DATE : 13/07/2019



ಸಂ.ಕ. 13/7/19

ಸಂ.ಕ. ಸಮಾಚಾರ ಬೆಂಗಳೂರು: ಗಾಂಧಿಯನ್ನೇ ಕೊಂದವರಿಗೆ ಈ ರಮೇಶ್ ಕುಮಾರ್ ಯಾವ ಲೆಕ್ಕ ನನ್ನನ್ನೂ ಕೊಲ್ಲಬಹುದು ಎಂದು ಸ್ಪೀಕರ್ ರಮೇಶ್ ಕುಮಾರ್ ಭಾವನಾತ್ಮಕವಾಗಿ ಮಾತನಾಡಿದ್ದಾರೆ.

ಅತೃಪ್ತ ಶಾಸಕರ ರಾಜೀನಾಮೆಗೆ ಸಂಬಂಧಿಸಿದಂತೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಇದು ಗಾಂಧಿಯನ್ನು ಕೊಂದ ದೇಶ. ಇನ್ನು ರಮೇಶ್ ಕುಮಾರ್ ಅವರನ್ನು ಬಿಡುತ್ತಾರಾ. ನಮಸ್ತೆ ಮಾಡುವ ನೆಪದಲ್ಲಿ ಗಾಂಧಿಗೆ ಗುಂಡು ಹೊಡೆದರು. ಗಾಂಧಿಯನ್ನು ಸಾಯಿಸಲು ಗುಂಡು ಬೇಕಾಗಿತ್ತಾ. ದೊಣ್ಣೆಯಲ್ಲಿ ಎರಡು ಏಟು ಹಾಕಿದ್ದರೆ ಸಾಯುತ್ತಿದ್ದರು. ದೈಹಿಕವಾಗಿ ಗಾಂಧಿಯನ್ನು ಸಾಯಿಸಿದರು. ಅವರ ಸತ್ತರೂ ನಮ್ಮ ಮಧ್ಯೆ ಇನ್ನು ಅವರು ಬದುಕಿಲ್ಲವೆ. ನಾವು ಗಾಂಧಿ ತತ್ವಗಳನ್ನು ಪಾಲನೆ ಮಾಡುವವರು ಎಂದ ಅವರು, ಬಹಳ ಹಿಂದಿನಿಂದಲೂ ನನ್ನ ತೇಜೋವಧೆ ಮಾಡುತ್ತಿದ್ದಾರೆ, ಮಾಡಲಿ. ಅವರಿಗೆಲ್ಲ ಒಳ್ಳೇದಾಗಲಿ ಎಂದು ಅಸಮಾಧಾನ ಹೊರಹಾಕಿದರು. ಶಾಸಕರು ರಾಜೀನಾಮೆ ಸಲ್ಲಿಸಿದ್ದಾರೆ. ಆ ಬಗ್ಗೆ ತೀರ್ಮಾನಕ್ಕೆ ಯೋಚನೆ ಮಾಡುತ್ತಿದ್ದೇನೆ.

ಸಂವಿಧಾನಕ್ಕೆ ಅಪಚಾರ, ಅತ್ಯಾಚಾರ ಮಾಡಲ್ಲ. ಯಾರ ಖುಷಿಗೆ, ಅಸಂತೋಷಕ್ಕೆ ನಾನು ಕುಣಿಯಲ್ಲ. ನಾನು ಸ್ವತ್ಯಗಾರ್ತಿ ಅಲ್ಲ. ಯಾರ ಒತ್ತಡಕ್ಕೂ ಮಣಿಯಲ್ಲ. ಎಲ್ಲವನ್ನೂ ನಿಯಮಾವಳಿ, ಕಾನೂನಾತ್ಮಕವಾಗಿಯೇ ಮಾಡುತ್ತೇನೆ ಎಂದರು.